# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 18048/2013

| | |
|---|---|
| ಸಾಕ್ಷಿದಾರರ ಹೆಸರು : | ದೇವರಾಜ |
| ತಂದೆಯ ಹೆಸರು : | ದೊಡ್ಡಯ್ಯ |
| ವಯಸ್ಸು : | 50 ವರ್ಷ |
| ಉದ್ಯೋಗ : | ಆಟೋ ಚಾಲಕ |
| ವಾಸ : | ಕುಮಾರಸ್ವಾಮಿ ಲೇಔಟ್, ಬೆಂಗಳೂರು. |

**ದಿನಾಂಕ 30-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ದಂ.ಪ್ರ.ಸಂ. ಕಲಂ. 299 ರಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ಫೆಬ್ರುವರಿ-2013 ರಲ್ಲಿ ನಾನು ಶಾಲಾ ಬಸ್ಸಿನ ಚಾಲಕನಾಗಿ ಕೆಲಸ ಮಾಡುತ್ತಿದ್ದೆ. 2013 ರ ಶಿವರಾತ್ರಿ ಹಿಂದೆ-ಮುಂದೆ ನಾನು ಶಾಲೆಯ ಕರ್ತವ್ಯಕ್ಕೆ ಹೋಗಿದ್ದಾಗ, ನನ್ನ ಹೆಂಡತಿ ಶಾಲೆಗೆ ಆಯಾ ಕೆಲಸಕ್ಕೆ ಹೋಗಿದ್ದು, ಆಕೆ ಸಂಜೆ 04.30 ಸಮಯದಲ್ಲಿ ಮನೆಗೆ ಬಂದಾಗ ಯಾರೋ ಮನೆಯ ಬೀಗ ತೆಗೆದು ಮನೆಯ ಬೀರುವಿನ ಬಾಗಿಲನ್ನು ಒಡೆದು ಅದರಲ್ಲಿದ್ದ ಒಂದು ಸರ, ಒಂದು ಜೊತೆ ಓಲೆ, ಒಂದು ಹ್ಯಾಂಗಿಂಗ್ಸ, ಒಂದು ಜೊತೆ ಗುಂಡು ಮತ್ತು ಇತರ ಬಂಗಾರದ ಆಭರಣಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ. ನಾವು ಇಬ್ಬರು ಕೆಲಸಕ್ಕೆ ಹೋಗುವುದರಿಂದ ಮನೆಯ ಬೀಗವನ್ನು ಬಾತರೂಂ ನ ಕಿಟಕಿಯಲ್ಲಿ ಇಟ್ಟು ಹೋಗುತ್ತಿದ್ದೇವು. ನಾವು ಬಂದು ನೋಡಿದಾಗ ಬಾತರೂಂ ಕಿಟಕಿಯಲ್ಲಿ ಇಟ್ಟಿದ್ದ ಕೀ ಅಲ್ಲಿಯೇ ಇತ್ತು. ಕಳ್ಳರು ಹೇಗೆ ನಮ್ಮ ಮನೆಯ ಬಾಗಿಲು ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ಬಹುಶಃ ನಾವು ಕಿಟಕಿಯಲ್ಲಿಟ್ಟಿದ್ದ ಕೀಯನ್ನೇ ಉಪಯೋಗಿಸಿರಹುದು.

2. ಅದೇ ದಿನ ಸಂಜೆ 07.00 ಗಂಟೆ ಸಮಯದಲ್ಲಿ ಹೋಗಿ ದೂರು ನೀಡಿದ್ದೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.** ಪೊಲೀಸರು

ಅದೇ ದಿನ ನಮ್ಮ ಮನೆಗೆ ಬಂದು ಸ್ಥಳವನ್ನು ಪರಿಶೀಲಿಸಿರುತ್ತಾರೆ, ಆ ಸಮಯದಲ್ಲಿ ಪೊಲೀಸರ ಜೊತೆಯಲ್ಲಿ ಪಂಚ ಸಾಕ್ಷಿ ಇದ್ದರು. ತುಂಬಾ ವರ್ಷಗಳಾಗಿರುವುದರಿಂದ ಅವರ ಹೆಸರು ನನಗೆ ಈಗ ನೆನಪಿಲ್ಲ. ಸಾಕ್ಷಿಯು ಪಂಚನಾಮೆ ಮತ್ತು ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು**.

3. ಸುಮಾರು 3 ತಿಂಗಳ ನಂತರ ಪೊಲೀಸರು ಕಳುವು ಆಗಿದ್ದ ಆಭರಣಗಳು ಸಿಕ್ಕಿವೆ ಎಂದು ಪೊಲೀಸ್ ಠಾಣೆಗೆ ಬಂದು ಗುರುತಿಸುವಂತೆ ಕರೆದರು. ಅಲ್ಲಿ ಕಳುವಾಗಿದ್ದ ನನ್ನ ಆಭರಣಗಳು ಸಿಕ್ಕಿದು ಅವುಗಳನ್ನು ತೋರಿಸಿದರು. ಅಲ್ಲಿ ನನಗೆ ಕಳ್ಳತನ ಮಾಡಿದ ವ್ಯಕ್ತಿಯನ್ನು ತೋರಿಸಲಿಲ್ಲ. ಪೊಲೀಸ್ ಠಾಣೆಯಲ್ಲಿ ಮುಚ್ಚಳಿಕೆ ಪತ್ರ ಬರೆದುಕೊಟ್ಟು ನನ್ನ ಆಭರಣಗಳನ್ನು ಮಧ್ಯಂತರ ಸ್ವಾಧೀನಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮುಚ್ಚಳಿಕೆ ಪತ್ರ ಮತ್ತು ಅದರ ಮೇಲೆ ಇರುವ **ಸಹಿಯನ್ನು ನಿಪಿ-3 ಮತ್ತು ನಿಪಿ-3(ಎ) ಎಂದು** ಗುರುತಿಸಲಾಯಿತು. ಬಂಗಾರದ ಆಭರಣಗಳನ್ನು ಪೊಲೀಸ್ ಠಾಣೆಯಲ್ಲಿ ಮಧ್ಯಂತರ ಸ್ವಾಧೀನಕ್ಕೆ ಪಡೆಯುವ ಸಮಯದಲ್ಲಿ ತೆಗೆದಿರುವ ಫೋಟೋ ನೋಡಿ ಗುರುತಿಸಿದ್ದಾರೆ. ಸದರಿ **ಫೋಟೋವನ್ನು ನಿಪಿ-4 ಎಂದು** ಗುರುತಿಸಲಾಯಿತು. ನನ್ನ ಕಳುವು ಆದ ಎಲ್ಲ ಆಭರಣಗಳು ಸಿಕ್ಕಿದ್ದವು ಅಥವಾ ಇನ್ನೂ ಕೆಲವು ಆಭರಣಗಳು ಸಿಕ್ಕಿಲ್ಲವೋ ಎನ್ನುವ ಬಗ್ಗೆ ಈಗ ನನಗೆ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಹಿ.ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಹಿ.ಸ.ಸ.ಅ ರವರಿಂದಃ**

4. ದಿನಾಂಕ 06/03/2013 ರಂದು ನಾನು ಮತ್ತು ನನ್ನ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುವಾಗ ಎಂದಿನಂತೆ ಮನೆಯ ಬೀಗವನ್ನು ಹಾಕಿ ಕೀಯನ್ನು ಮನೆಯಲ್ಲಿ ಇಟ್ಟು ಹೋಗಿದ್ದೇವು ಎಂದರೆ ಸರಿ. ಬೆಳಿಗ್ಗೆ 08.00 ಗಂಟೆಗೆ ಮನೆಯ ಬೀಗ ಹಾಕಿ ಹೋಗಿದ್ದು,

ಮದ್ಯಾಹ್ನ ಕೆಲಸ ಮುಗಿಸಿ ಬಂದು 02.45 ಗಂಟೆಯ ಸಮಯದಲ್ಲಿ ನೋಡಿದಾಗ ಮನೆಯ ಕಿಟಕಿಯಲ್ಲಿಟ್ಟಿದ್ದ ಬೀಗವನ್ನು ಉಪಯೋಗಿಸಿ ಯಾರೋ ಕಳ್ಳರು ಮನೆಯ ಒಳಗೆ ಪ್ರವೇಶಿಸಿ ಬೀರುವಿನ ಬಾಗಿಲು ತೆರೆದು ಅದರಲ್ಲಿಟ್ಟಿದ್ದ ಒಂದು ಜೊತೆ ಓಲೆ ಜುಮುಕಿ, ಒಂದು ಜೊತೆ ಗುಂಡು ಜುಮುಕಿ, ಎರಡು ಸೈಡ ರಿಂಗ್, ಒಂದು ಜೊತೆ ಕಿವಿಯ ಓಲೆ ಮತ್ತು ಹ್ಯಾಂಗಿಂಗ್ಸ, ಒಂದು ಜೊತೆ ಮಾಟಿ, ಎರಡು ಚಿನ್ನದ ಉಂಗುರುಗಳು ಮತ್ತು ಒಂದು ಚಿನ್ನದ ಚೈನ್ ಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ ಎಂದು ತಿಳಿಯಿತು ಎಂದರೆ ಸರಿ. ನಾನು ಅದೇ ದಿನ ಸಂಜೆ 07.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿ.

5. ಪೊಲೀಸರು ಮರುದಿನ ಅಂದರೆ 07/03/2013 ರಂದು ಬೆಳಿಗ್ಗೆ 08.00 ಗಂಟೆಯಿಂದ 09.00 ಗಂಟೆಯ ಅವಧಿಗೆ ನಮ್ಮ ಮನೆಗೆ ಸ್ಥಳ ಪರಿಶೀಲನೆಗೆ ಬಂದಿದ್ದು, ಆಗ ನಾನೇ ಪೋಲೀಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಪಂಚರಾಗಿ ರಮೇಶ , ಶಿವಪುತ್ರಪ್ಪ ಮತ್ತು ದೊರೆಸ್ವಾಮಿ (ಚಾಸಾ-2 ರಿಂದ 4 ರವರು) ಎನ್ನುವವರು ಪಂಚರಾಗಿ ಇದ್ದು ಪಂಚನಾಮೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆಗೆ ನಾನು ಸಹ ಸ್ಥಳದಲ್ಲಿಯೇ ಸಹಿ ಮಾಡಿದ್ದೆ ಎಂದರೆ ಸರಿ.

6. ದಿನಾಂಕ 15/09/2013 ರಂದು ಕಳುವು ಮಾಡಿದ್ದ ಆರೋಪಿ ಮತ್ತು ಚಿನ್ನದ ಒಡವೆಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿ ಪೊಲೀಸ್ ಠಾಣೆಗೆ ಬರುವಂತೆ ಕರೆದರು. ನಾನು ಪೊಲೀಸ್ ಠಾಣೆಗೆ ಹೋಗಿ ಅಮಾನತ್ತುಪಡಿಸಿಕೊಂಡಿದ್ದ ನಮ್ಮ ಮನೆಯಲ್ಲಿ ಕಳುವಾಗಿದ್ದ ಚಿನ್ನದ ಆಭರಣಗಳನ್ನು ನೋಡಿ ಗುರುತಿಸಿದ್ದು, ಅವುಗಳ ಒಟ್ಟು ತೂಕ ಸುಮಾರು 35 ಗ್ರಾಂ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಕಳುವು ಮಾಡಿದ್ದ ಆರೋಪಿಯನ್ನು ಪೊಲೀಸರು ನನಗೆ ತೋರಿಸಿದ್ದರು ಎಂದರೆ ಸರಿ. ಬಂಗಾರದ ಆಭರಣಗಳನ್ನು ಗುರುತಿಸಿದ ಬಗ್ಗೆ ಮತ್ತು

ಆರೋಪಿಯನ್ನು ನೋಡಿದ ಬಗ್ಗೆ ಹೇಳಿಕೆ ನೀಡಿದ್ದೆ ಎಂದರೆ ಸರಿ. ಮತ್ತೆ ಪುನಃ ಆರೋಪಿಯನ್ನು ನೋಡಿದರೆ ನನಗೆ ಗುರುತಿಸಲಾಗುವುದಿಲ್ಲ, ಯಾಕೆಂದರೆ ತುಂಬಾ ವರ್ಷಗಳಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.